


## 22-04-2024

ನಾವು ವಾಸಿಸುತ್ತಿರುವ ಭೂಮಿಗೆ ಸುಮಾರು 5 ಸಾವಿರ ದಶಲಕ್ಷ ವರ್ಷಗಳ ಇತಿಹಾಸವಿದ್ದು, 7 ಖಂಡಗಳಿಗೆ 2 ಸಾವಿರದ 500 ವರ್ಷಗಳ ಇತಿಹಾಸವಿದೆ. ಇಂತಹ ಸಮೃದ್ಧವಾದ ಇತಿಹಾಸವಿರುವ ಭೂಮಿಯ ಇಂದು ವಿರೂಪಗೊಳ್ಳುತ್ತಿದೆ ಎಂದು ಡಾ.ಶ್ರೀಹರ್ಷ ತಿಳಿಸಿದರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾ.ಸೇ.ಯೋ ಮತ್ತು ಎನ್.ಸಿ.ಸಿ ಘಟಕಗಳು ಏರ್ಪಡಿಸಿದ್ದ ವಿಶ್ವ ಭೂ ದಿನ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಸ್ವಾತಂತ್ರ್ಯ ನಂತರದಲ್ಲಿ ಆರಂಭವಾದ ಕೈಗಾರಿಕಾ ಕ್ರಾಂತಿಯಿಂದ ಭೂಮಿಯ ವಿನಾಶ ಆರಂಭವಾಯಿತು. ಮನುಷ್ಯನ ದುರಾಸೆಯಿಂದಾಗಿ ಭೂಮಿಯ ಮೇಲೆ ಅತಿಯಾದ ಒತ್ತಡವನ್ನಾಕಲಾರಂಭಿಸಿದನು. ಪರಿಣಾಮ ಪ್ರಕ್ಥತಿಯ ಮೇಲೆ ಒತ್ತಡವಾಗಿ ಜೀವ ಸಂಶಯಾದ ನಾಶ ಆರಂಭವಾಯಿತು. ಮನುಷ್ಯನಿಗೆ ಉಚಿತವಾಗಿ ಸಿಗುವ ಯಾವುದೇ ವಸ್ತುಗಳ ಬಗ್ಗೆ ಬೆಲೆ ಕೊಡುವುದಿಲ್ಲ. ಗಾಳಿ, ನೀರು, ಬೆಳಕು, ಅರಣ್ಯ ಸಂಪತ್ತು ಇತ್ಯಾದಿಗಳನ್ನು ಯಥೇಚ್ಚವಾಗಿ ಬಳಸಿಕೊಂಡು ಅವುಗಳು ಕೊರತೆಯಾಗಿವಂತೆ ಮಾಡುತ್ತಿದ್ದಾನೆ. ಸೂರ್ಯನ ಬೆಳಕಿಲ್ಲದೆ ಮಾನವನಷ್ಟೇ ಅಲ್ಲದೆ ಗಿಡ ಮರಗಳು ಬದುಕುವುದಿಲ್ಲ. ಅತಿಯಾದ ವಾಹನಗಳ ಬಳಕೆಯಿಂದ ಮತ್ತು ಸಿ.ಎಫ್.ಸಿ ಬಳಕೆಯಿಂದ ಪ್ರಕೃತಿಯಿಲ್ಲಿರುವ ಓಜೋಸ್ ಪದರ ನಾಶವಾಗಿ ಸೂರ್ಯನಿಂದ ನೇರವಾಗಿ ಅತಿ ನೇರಳೆ ಕಿರಣಗಳು ಭೂಮಿಯನ್ನು ಪ್ರವೇಶಿಸಿ ದುಷ್ಪರಿಣಾಮ ಉಂಟುಮಾಡುತ್ತಿವೆ.

ಬೇರೆ ಗ್ರಹಗಳಿಗಿಂತ ಭೂಮಿ ಅತ್ಯಂತ ವಿಶಿಷ್ಟವಾದುದು. ಏಕೆಂದರೆ ಭೂಮಿಯ ಮೇಲೆ ಮಾತ್ರ ಮನುಷ್ಯ ಮತ್ತು ಮರ ಗಿಡಗಳು ಬದುಕಲು ಸಾಧ್ಯ. ಭೂಮಿಯ ಮಣ್ಣಿಗೆ ಮಾತ್ರ ಉತ್ಪಾದನಾ ಶಕ್ತಿ ಇರುವುದು. ಮಣ್ಣಿಂದಲೇ ಕಾಯ, ಮಣ್ಣಿನಂದಲೇ ಜೀವನ ಎನ್ನುವ ಸತ್ಯವನ್ನು ಎಲ್ಲಿಯವರೆಗೆ ನಾವು ಅರಿಯುವುದಿಲ್ಲೋ ಅಲ್ಲಿಯವರೆಗೂ ನಮಗೆ ಉಳಿಗಾಲವಿಲ್ಲ. ಮನುಷ್ಯನು ಭೂಮಿಯನ್ನು ಮಲಿನಗೊಳಿಸಲು ಆರಂಭಿಸಿ ಭೂಮಿಯನ್ನು ಹಾಳು ಮಾಡುತ್ತಿದ್ದಾನೆ. ಹಾಗೂ ನವೀಕರಿಸಲಾರದ ಇಂಧನಗಳನ್ನು ಉಳಿಸಬೇಕಾದುದು ಅನಿವಾರ್ಯ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ ಮಾತನಾಡಿ ಪರಿಸರವನ್ನು ಹಾಳು ಮಾಡಿತ್ತಿರುವವರು ಮನುಷ್ಯರು ಹಾಗಾಗಿ ಪ್ರಕೃತಿಯಲ್ಲಿ ಇರುವ ಉತ್ಕೃಷ್ಟವಾದ ಸಂಪನ್ಮೂಲಗಳನ್ನು ಉಳಿಸಿ ಬಳಸಿಕೊಳ್ಳ ಬೇಕಾದುದು ಅನಿವಾರ್ಯ, ವರ್ಷಕ್ಕೊಂದಾವರ್ತಿ ಆಚರಿಸುವ ಭೂಮಿ ದಿನವನ್ನು ವರ್ಷಪೂರ್ತಿ ಆಚರಿಸುವಂತಾಗ'ಲಿ, ಮನುಷ್ಯನ ಆಸೆಗಳಿಗೆ ಮಿತಿ ಇರಲಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯಕ್ರಮ ಅಧಿಕಾರಿಗಳಾದ ಪ್ರೊ.ಅರವಿಂದ್.ಆರ್. ಸ್ವಾಗತಿಸಿ, ಪ್ರೊ.ಸಿದ್ದರಾಜು.ಎಸ್ ರಾ.ಸೆ.ಯೋ ವಂದಿಸಿದರೆ ಅಧ್ಯಾಪಕರು ಮತ್ತು ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.









FIRST GRADE COLLEGE


VIDYAVARDHAKA FIRST GRADE COLLEGE
MYSORE
Celebration of Earth day and World Environment day
Date: 22/04/2024
place:- Mysore


RDHAKA FIRST GRADE COLLEGE
MYSORE
Earth day and World Environment day
Date
place:- Mysore

